# ಆಹಾ ಸುದ್ದಿ!

★ ಸಸಿತೋಟ



ಚೀನಾದ ಈ ವ್ಯಕ್ತಿ ಶಾವೊಲಿಯಾನ್‌ನ ಹಣೆ ಎಂಬೋ ಹೊಲದಲ್ಲಿ ಮೂಗೊಂದು ಹೇಗೆ ಪೊಗದಸ್ತಾಗಿ ಬೆಳೆದಿದೆ ನೋಡಿ. ಸೋಂಕಿನಿಂದ ಮೂಗು ಕೊಳೆತು ಹೋಗಿದ್ದರಿಂದ ಚರ್ಮದ ಅಂಗಾಂಶವನ್ನು ಆತನ ಹಣೆಯ ಮೇಲೆ ನೆಟ್ಟು ಬೆಳೆಸಿದರಂತೆ. ಈಗ ಮೂಗು ಕೊಯ್ಲಿಗೆ ಸಿದ್ಧವಾಗಿದ್ದು, ಅದನ್ನು ಕತ್ತರಿಸಿ ಹಳೆಯ ಮೂಗಿನ ಜಾಗದಲ್ಲಿ ನೆಡುತ್ತಾರಂತೆ. ಇನ್ನು ಮುಂದೆ ಇದೇ ರೀತಿ ಕೈ- ಕಾಲು, ಹೃದಯ, ಕಿಡ್ನಿ ಎಂದೆಲ್ಲ ಬಿತ್ತಿ ಬೆಳೆಸಬಹುದು.

ನ್ಯೂಯಾರ್ಕ್‌ನ ಹೆರಾಲ್ಡ್ ಚೌಕದಲ್ಲಿ ಇತ್ತೀಚೆಗೆ 'ಟ್ವರ್ಕಿಂಗ್' ನೃತ್ಯದಲ್ಲಿ ಗಿನ್ನೆಸ್ ದಾಖಲೆ ಮಾಡಲಾಯಿತಂತೆ. ಹೇಳಿಕೇಳಿ ಅದು ಪ್ರಚೋದನಕಾರಿ ನೃತ್ಯ. ಒಬ್ಬರ ನೃತ್ಯ ಇನ್ನೊಬ್ಬರನ್ನು ಪ್ರಚೋದಿಸಿ 358 ಜನ ಕುಣಿದರಂತೆ. ಕೊನೆಗೆ ಬಂದ ಮಾಜಿ ನಟಿ 73 ವರ್ಷದ ವಿಂಡ್ ಜೋನ್ಸ್ ಕುಣಿಯತೊಡಗಿದಾಗ ಪ್ರಚೋದನೆ ರಿವರ್ಸ್ ಹೊಡೆದು ಕುಣಿತಕ್ಕೆ ಮಂಗಳ ಹಾಡಬೇಕಾಯ್ತೇನೋ!





ಸ್ವೀಡನ್ನಿನ ಬೆರ್ಟಿಲ್ ಈಚೆಗಷ್ಟೆ 95ನೇ ಹುಟ್ಟುಹಬ್ಬ ಆಚರಿಸಿಕೊಂಡ. ಜೊತೆಗೆ ವಾಹನ ಚಾಲನಾ ಪರವಾನಗಿಯನ್ನೂ ನವೀಕರಿಸಿಕೊಂಡ. ಹೊಸ ಫೋಕ್ಸ್‌ವ್ಯಾಗನ್ ಕಾರನ್ನು ಖರೀದಿಸಿರುವ ಈ ತಾತ, ಸೆಂಚುರಿ ಹೊಡೆಯುವವರೆಗೂ ಕಾರನ್ನು ಓಡಿಸುತ್ತಾನಂತೆ. ಸ್ವೀಡನ್ನಿನಲ್ಲಿ ಈ ರೀತಿ ಚಾಲನಾ ಪರವಾನಗಿ ಹೊಂದಿದ 62 ಲಕ್ಷ ಜನರಲ್ಲಿ 15 ಲಕ್ಷ ಮಂದಿ 65 ವರ್ಷಗಳಿಗಿಂತ ಹೆಚ್ಚು ವಯಸ್ಸಾದವರಂತೆ! ಚಾಲಕ ಲಿಫ್ಟ್ ಕೊಡುತ್ತೇನೆಂದರೆ ಯುವತಿಯರು ಧೈರ್ಯದಿಂದ ಹೋಗಬಹುದು!



ಚೀನಾದ ಯುನ್ನಾನ್ ವನ್ಯಜೀವಿ ಧಾಮಕ್ಕೆ ಭೇಟಿ ಕೊಡುವವರಿಗೆ ಬಸ್‌ನಲ್ಲಿ ಪೂರ್ವಜರು ಕಂಪೆನಿ ಕೊಟ್ಟು ಖುಷಿ ಕೊಡುತ್ತಾರಂತೆ. ವಿಶೇಷ ಆಕರ್ಷಣೆ ಹೆಸರಲ್ಲಿ ಈ ಯೋಜನೆ ಜಾರಿಗೆ ತರಲಾಗಿದೆ. ಇನ್ನೊಂದು ಮೃಗಾಲಯದಲ್ಲಿ ನಾಯಿ, ಬೆಕ್ಕುಗಳಿಗೆ ಸಿಂಹ, ಹುಲಿ ಮರಿಯ ಚರ್ಮ ತೊಡಿಸಿ ನಗೆಪಾಟಲಿಗೀಡಾಗಿದ್ದ ಚೀನಾ, ಎಲ್ಲಿ ಮನುಷ್ಯರಿಗೇ ಮಂಗನ ತೊಗಲು ತೊಡಿಸಿ ಪ್ರವಾಸಿಗರನ್ನು 'ಕುರಿ'ಗಳನ್ನಾಗಿ ಮಾಡುತ್ತಿದೆಯೇ ಎಂಬ ಸಣ್ಣ ಸಂಶಯವೂ ಇದೆ.

ಪಾರ್ಕಿಂಗ್‌ಗೆ ಕಾಸಿನ ಬದಲು ಬೀದಿಯಲ್ಲಿರುವ ಹರಳು ಕಲ್ಲು, ಬದಿಯಲ್ಲಿ ಬೆಳೆಯುವ ಮರಗಳ ಬೀಜಗಳನ್ನು ಕೊಡುವಂತಾದರೆ ಎಷ್ಟು ಹಣ ಉಳಿಸಬಹುದಲ್ಲ! ಇಂಗ್ಲೆಂಡ್‌ನ ಲೀಡ್ಸ್ ಮತ್ತು ಮ್ಯಾಂಚೆಸ್ಟರ್‌ನಲ್ಲಿ ಪಾರ್ಕಿಂಗ್ ಮಾಡುವವರು ಹಾರ್ಸ್ ಚೆಸ್ಟ್‌ನಟ್ (ಮುಳ್ಳಿನ ಕಾಯೊಳಗಿರುವ ಬೀಜವನ್ನು ಮಕ್ಕಳು 'ಕಾಂಕರ್ಸ್' ಎಂದು ಆಡುವುದಿದೆ) ಬೀಜಗಳನ್ನು 32 ಸೆಂಟ್ಸ್ ಬದಲು ನೀಡಬಹುದಂತೆ. ಆದರೆ ಸಂಗ್ರಹಿಸಿದ ಬೀಜಗಳನ್ನು ಏನು ಮಾಡಬೇಕು ಎಂಬುದನ್ನು ಪಾರ್ಕಿಂಗ್ ಉಸ್ತುವಾರಿ ಕಂಪೆನಿ ಇನ್ನೂ ನಿರ್ಧರಿಸಿಲ್ಲವಂತೆ. ಪಾರ್ಕಿಂಗ್ ಶುಲ್ಕ ವಸೂಲು ಮಾಡಲು ಹೊರಟಿರುವ ಬಿಬಿಎಂಪಿ ಇಂಗ್ಲೆಂಡ್‌ನ ಈ ಪಾರ್ಕಿಂಗ್ ವ್ಯವಸ್ಥೆಯನ್ನು ಪರಿಶೀಲಿಸಬಹುದು.



ಕೃಷಿ ಕಾರ್ಮಿಕರೇ ಸಿಗುತ್ತಿಲ್ಲ ಎಂದು ಅಲವತ್ತುಕೊಳ್ಳುವವರಿಗೆ ಜಪಾನಿನ ರಾಷ್ಟ್ರೀಯ ಕೃಷಿ ಮತ್ತು ಸಂಶೋಧನಾ ಸಂಸ್ಥೆ ರೋಬಾಟ್ ಕೂಲಿಗಳನ್ನು ಒದಗಿಸಲು ಮುಂದಾಗಿದೆ. ಸ್ಟ್ರಾಬೆರಿ ತೋಟದಲ್ಲಿ ಯಾವ ಹಣ್ಣು ಪಕ್ವವಾಗಿದೆ ಎಂಬುದನ್ನು ಕ್ಯಾಮೆರಾ ಮೂಲಕ ಗುರುತಿಸಿ ಹಣ್ಣು ಕೀಳುವುದಂತೆ ಈ ರೋಬಾಟ್. ಅದೂ 8 ಸೆಕೆಂಡ್‌ಗೆ ಒಂದು ಹಣ್ಣು ಕೀಳುತ್ತದೆ. ಕೀಳುವಾಗ ಹಣ್ಣುಗಳನ್ನು ಕದ್ದು ಬಾಯೊಳಗೆ ಎಸೆದುಕೊಳ್ಳುವುದಿಲ್ಲವಂತೆ ಈ ರೋಬಾಟ್. ಈ ರೋಬಾಟ್ ಕೂಲಿಗಳನ್ನು ಪಡೆಯಲು ನಮ್ಮಲ್ಲಿನ ಕಾರ್ಮಿಕ ಗುತ್ತಿಗೆದಾರರು ಯತ್ನಿಸಬಹುದೇನೊ!